# ಎದೆಯಲ್ಲಿ ನೋವು, ತುಟಿಯಲ್ಲಿ ನಗು

# ನಾವು ಶಾಪಗ್ರಸ್ತ ಗಂಧರ್ವರು!

**ತಾಯಿಯೊಬ್ಬಳು ಮಗುವನ್ನು ಹೆತ್ತು, ನಿದ್ರೆಗೆಟ್ಟು ಹಾಲು ಕುಡಿಸಿ, ಮಲಮೂತ್ರ ಬಳಿದು, ಕಣ್ಣಲ್ಲಿ ಕಣ್ಣಿಟ್ಟು ಕಾಪಾಡಿದ ನಂತರ, ಮಗು ದೊಡ್ಡದಾಗಿ, 'ತಾಯ್ತನ ನಿನಗೆ ಕಷ್ಟ ಅನಿಸಲಿಲ್ಲವಾ?' ಎಂದು ಕೇಳಿದರೆ ತಾಯಿ ಏನನ್ನುತ್ತಾಳೆ? ಇಂಥ ಪ್ರಶ್ನೆ ನರ್ಸ್‌ಗಳಿಗೆ ಎದುರಾದರೆ ಅವರ ಉತ್ತರ ಏನಿರಬಹುದು?**

■ ನಿರೂಪಣೆ: **ಚೈತ್ರಿಕಾ ನಾಯ್ಕ ಹರ್ಗಿ**

ನಾನು ಹುಟ್ಟಿದ್ದು ಸಾಗರದ ಆನಂದಪುರಂನಲ್ಲಿ. ಊರು ಚಿಕ್ಕಮಗಳೂರಿನ ನರಸಿಂಹರಾಜಪುರ. ಪಿ.ಯು.ಸಿ.ವರೆಗೆ ಅದೇ ಊರಿನಲ್ಲಿ ಶಿಕ್ಷಣ ಮುಗಿಸಿದೆ. ಶೃಂಗೇರಿಯಲ್ಲಿ ಮೂರೂವರೆ ವರ್ಷ ಜನರಲ್ ನರ್ಸಿಂಗ್ ಮಾಡಿದೆ. ಶಿವಮೊಗ್ಗದಲ್ಲಿ ಎರಡು ವರ್ಷ ಪಿಸಿಬಿ. ಎಸ್.ಸಿ. ಓದಿ ನರ್ಸಿಂಗ್ ವೃತ್ತಿಯನ್ನು ಆರಂಭಿಸಿದೆ.

ಶಿವಮೊಗ್ಗದ ನಾರಾಯಣ ಹೃದಯಾಲಯ, ಬೆಂಗಳೂರಿನ ಮಲ್ಲೇಶ್ವರಂನಲ್ಲಿನ ಅಪೊಲೊ, ಕೆನ್ನಮೆಟಲ್ ಇಂಡಿಯಾ ಲಿಮಿಟೆಡ್ ಕಂಪನಿಯಲ್ಲಿ ಎಮರ್ಜೆನ್ಸಿ ನರ್ಸ್ ಆಗಿ ಮೂರು ವರ್ಷ ಕೆಲಸ ಮಾಡಿದ್ದೇನೆ.

ನಂತರ ಕೊಲಂಬಿಯಾ ಏಷ್ಯಾ ಆಸ್ಪತ್ರೆಯಲ್ಲಿಯೂ ಕೆಲಸ ಮಾಡಿದೆ. ಅದೇ ವೇಳೆಗೆ ಕೋವಿಡ್ ಸಾಂಕ್ರಾಮಿಕ ಶುರುವಾದ ಕಾರಣ ಸರ್ಕಾರ ಕೋವಿಡ್ ಆರೋಗ್ಯ ತುರ್ತು ಪರಿಸ್ಥಿತಿ ನಿಭಾಯಿಸಲು ನರ್ಸ್‌ಗಳನ್ನು ನೇಮಕ ಮಾಡಿಕೊಂಡಿತು. ಅದರಲ್ಲಿ ಆಯ್ಕೆಯಾಗಿ ಚಿಕ್ಕಮಗಳೂರು ಜಿಲ್ಲಾಸ್ಪತ್ರೆಯಲ್ಲಿ ಕೋವಿಡ್ ಡ್ಯೂಟಿ ಆರಂಭಿಸಿದೆ.



ಚಿಕ್ಕಮಗಳೂರಿನ ಶರತ್ ಆರ್. ಖಂಡೋಜಿ ಕಳೆದ ಎಂಟು ವರ್ಷಗಳಿಂದ ನರ್ಸ್ ಆಗಿ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರಿನ ಹಲವು ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಶುಶ್ರೂಷಕನಾಗಿ ಸೇವೆ ಸಲ್ಲಿಸಿರುವ ಇವರು, ಕೋವಿಡ್ ಉಲ್ಬಣಾವಸ್ಥೆಯಲ್ಲಿದ್ದಾಗ ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸಿದ್ದಾರೆ.

ಬೇರೆ ವೃತ್ತಿಯಲ್ಲಿ ಇರುವಂತೆಯೇ ನರ್ಸಿಂಗ್ ವೃತ್ತಿಯಲ್ಲಿ ಖುಷಿ, ಬೇಸರ, ದುಃಖ, ಖಿನ್ನತೆ ಎಲ್ಲವೂ ಇರುತ್ತದೆ. ಆದರೆ ಎಲ್ಲವೂ ತುಸು ಹೆಚ್ಚೇ ಇರುತ್ತದೆ. ಹುಟ್ಟು–ಸಾವು, ಅಪಘಾತ ಎಂಬುದೆಲ್ಲ ಉಳಿದವರಿಗೆ ಅಪರೂಪದ ಸಂಗತಿಗಳಾದರೆ, ನಮಗೆ ದಿನನಿತ್ಯ ಕಾಣುವ ಸಂಗತಿಗಳು.

ನರ್ಸ್‌ಗಳು ವೈದ್ಯಕೀಯ ರಂಗದ ಹೃದಯ ಎಂದು ಕರೆಯುತ್ತಾರೆ. ನೋವು ನೀಗಿಸುವ ಗಂಧರ್ವರು ಅಂತಲೂ ಅಂತಾರೆ. ಆದರೆ ನೋವು ನೀಗಿಸುವ ನರ್ಸಿಂಗ್ ವೃತ್ತಿಯಲ್ಲಿ ಗಂಧರ್ವರ ಹೃದಯಕ್ಕೂ ಬಹಳ ಬಾರಿ ನೋವಾಗುತ್ತದೆ. ರೋಗಿಯ ಪರಿಸ್ಥಿತಿ ಕೈಮೀರಿ ಹೋಗಿದ್ದಾಗ ಅವರ ಕಡೆಯವರು 'ಹೇಗಾದರೂ ನಮ್ಮವರನ್ನು ಬದುಕಿಸಿಕೊಡಿ' ಎಂದು ಅಂಗಲಾಚುತ್ತಾರಲ್ಲ, ಅದು ಬದುಕಿನ ದೊಡ್ಡ ಅಸಹಾಯಕತೆಯ ಕ್ಷಣ. ಕೈಯಲ್ಲಿ ಹಣವಿಲ್ಲದೆ ಇರುವವರು – 'ಖರ್ಚು

